ನೋಡಬಹುದಾಗಿದೆ. ಸಮ್ಮೋಹಕ ತನ್ನ ಗಂಭೀರವಾದ ಆದರೆ ಹಿತಕರವಾದ ಧ್ವನಿಯಲ್ಲಿ ವ್ಯಕ್ತಿಗೆ ಸೂಚನೆ ಕೊಡಲು ಪ್ರಾರಂಭಿಸುತ್ತಾನೆ.

‘ವಸುಧಾ ನನ್ನ ಮುಖವನ್ನು ನೋಡು. ನನ್ನ ಕೈ ಬೆರಳುಗಳ ಚಲನೆಯನ್ನು ನೋಡುತ್ತಿರು. ನೋಡುತ್ತಾ ನೋಡುತ್ತಾ ನೀನು ನಿದ್ರೆ ಮಾಡುತ್ತೀಯಾ... ಸುಖವಾದ ನಿದ್ರೆ ಮಾಡುತ್ತೀಯಾ... ನಿದ್ರಾ ಸ್ಥಿತಿಯಲ್ಲಿ ನಿನಗೆ ಯಾವ ಚಿಂತೆ, ನೋವು, ತೊಂದರೆ ಇಲ್ಲ. ಈಗ ನಿನಗೆ ಮಧುರವಾದ ಗಂಟಾನಿನಾದ ಕೇಳಿಸುತ್ತಿದೆ. ಕೇಳಿಸುತ್ತಿದೆಯಲ್ಲವೇ. ಅದನ್ನೇ ಆಲಿಸು. ಕಣ್ಣು ಮುಚ್ಚಿಕೋ. ರೆಪ್ಪೆಗಳು ನಿನ್ನ ಕಣ್ಣುಗಳನ್ನು ಮೃದುವಾಗಿ ಮುಚ್ಚಲಿ. ನಿದ್ರೆ ನಿನ್ನನ್ನು ಆವರಿಸುತ್ತಿದೆ. ನಿನ್ನ ಕೈಯನ್ನು ಸ್ವಲ್ಪ ಮೇಲಕ್ಕೆ ಎತ್ತುತ್ತೇನೆ. ಅದು ಕೆಳಕ್ಕೆ ಬೀಳುವುದಿಲ್ಲ. ಹಾಗೇ ಗಟ್ಟಿಯಾಗಿ ನಿಲ್ಲುತ್ತದೆ. ಅದು ಬಾಗುವುದಿಲ್ಲ. ನಿನ್ನ ಕಣ್ಣುಗಳನ್ನು ಬಿಡಿಸುತ್ತೇನೆ. ಆದರೆ ಅವು ತೆರೆಯುವುದಿಲ್ಲ...’ ವ್ಯಕ್ತಿ ಸಮ್ಮೋಹನ ಸ್ಥಿತಿಯನ್ನು ತಲುಪಿದ್ದಾಳೆ. ‘ವಸುಧಾ ಹೇಳು, ಒಂದು ತಿಂಗಳ ಹಿಂದೆ ನೀನು ಪ್ರಜ್ಞೆ ತಪ್ಪಿ ಬಿದ್ದೆ. ಆಗ ನಿನ್ನ ಮನ್ನಸಿನಲ್ಲಿ ಯಾವುದೋ ನೋವಿತ್ತು. ಆಘಾತವಿತ್ತು. ಚೆನ್ನಾಗಿ ನೆನಪಿಸಿಕೊಂಡು ಹೇಳು...’

‘ರಂಗನಾಥ ಅಲ್ಲವೇ ನಿನ್ನ ಹೆಸರು. ನೋಡು ನಾನೀಗ ನಿನ್ನ ಹಣೆಯಲ್ಲಿರುವ ಒಂದು ಅದೃಶ್ಯ ಬಿಂದುವನ್ನು– ಶಕ್ತಿ ಕೇಂದ್ರವನ್ನು ನನ್ನ ಬೆರಳ ತುದಿಯಿಂದ ಅದುಮುತ್ತೇನೆ. ಆಗ ನಿನಗೆ ಒಂದು ರೀತಿಯ ವಿಶೇಷ ಅನುಭವವಾಗುತ್ತದೆ. ಆಗುತ್ತಿದೆಯಾ... ಗುಡ್... ಆ ಶಕ್ತಿ ನಿನ್ನ ದೇಹ ಮನಸ್ಸನ್ನೆಲ್ಲಾ ಆವರಿಸುತ್ತಿದೆ. ನೀನು ನಿದ್ರೆಗೆ ಜಾರುತ್ತೀಯ. ನಿದ್ರೆಯಲ್ಲಿ ನೀನು ಆಕಾಶ, ಸೂರ್ಯ ಚಂದ್ರರನ್ನು ಕಾಣುತ್ತೀಯ. ದೇವ ಗಂಧರ್ವರನ್ನೂ ಕಾಣುತ್ತೀಯಾ. ಅವರೆಲ್ಲ ಜ್ಯೋತಿ ಸ್ವರೂಪರು. ಪ್ರಕಾಶಮಾನವಾದ ಜ್ಯೋತಿ ಕಾಣಿಸುತ್ತಿದೆ. ನಿನಗೆ ಪ್ರಶ್ನೆಗಳನ್ನು ಕೇಳುತ್ತೇನೆ. ಪ್ರಶ್ನೆಗೆ ಪ್ರಾಮಾಣಿಕವಾದ ಉತ್ತರವನ್ನು ಕೊಡುತ್ತೀಯ. ಯಾವುದನ್ನೂ ಮುಚ್ಚಿಡುವುದಿಲ್ಲ. ಹೋದ ಗುರುವಾರ ರಾತ್ರಿ ಏನಾಯಿತು? ಎಲ್ಲವನ್ನೂ ಹೇಳು. ನಿನಗೇನಾಯಿತು. ಯಾರಿಗೆ ಏನಾಯಿತು. ಭಯವಾಯಿತೇ? ಹೇಗೆ ಹೇಳು...’

‘ರಂಗನಾಥ ಈಗ ಶಕ್ತಿ ಕೇಂದ್ರದಿಂದ ಶಕ್ತಿ ಬಿಡುಗಡೆಯಾಗಿದೆ. ನಿನ್ನ ನೋವೆಲ್ಲ ಪರಿಹಾರವಾಗುತ್ತದೆ. ಭಯವೂ ಹೋಗುತ್ತದೆ. ಯಾವುದೇ ಕಷ್ಟ–ನಷ್ಟವನ್ನು ಎದುರಿಸುವ ಧೈರ್ಯ ಇರುತ್ತದೆ. ನಿನಗೆ ಮತ್ತೆ ಪ್ರಜ್ಞೆ ತಪ್ಪುವುದಿಲ್ಲ. ತಿಳಿಯಿತೇ? ಹೇಳು ನನಗೆ... ನಿನಗೆ ಪ್ರಜ್ಞೆ ತಪ್ಪುವುದಿಲ್ಲ... ಗುಡ್. ಈಗ ಒತ್ತುವುದನ್ನು ನಿಲ್ಲಿಸುತ್ತೇನೆ. ಕ್ರಮೇಣ ಕಣ್ಣುಗಳನ್ನು ತೆರೆ, ನನ್ನನ್ನು ನೋಡು...’

## ಸಮ್ಮೋಹನ ಚಿಕಿತ್ಸೆ (Hypno therapy)

ಸಮ್ಮೋಹನವನ್ನು ಬಳಸಿ ರೋಗಲಕ್ಷಣಗಳನ್ನು ತೆಗೆಯಬಹುದು. ರೋಗವನ್ನು ವಾಸಿ ಮಾಡಬಹುದು ಎಂದು ಫ್ರಾನ್ಜ್ ಮೆಸ್ಮರ್ ಮತ್ತು ಜೇಮ್ಸ್ ಬ್ರೇಯ್ಡ್ ನಂಬಿದ್ದರು. ಸಮ್ಮೋಹನದಿಂದ ವ್ಯಕ್ತಿಯ ಆಲೋಚನೆ



## ವೇದಿಕೆ- ರಂಗ ಸಮ್ಮೋಹನ (STAGE HYPNOSIS)

ಕೆಲವು ಮನರಂಜನಾ ಕಾರ್ಯಕ್ರಮಗಳಲ್ಲಿ ಸಂಮೋಹಕನು ವೇದಿಕೆಗೆ ಬಂದು, ಹಿಪ್ನೋಟಿಸ್ ತಂತ್ರವನ್ನು ರಂಜನೆಗಾಗಿ ಬಳಸಬಹುದು. ನಾನು ನಿಮ್ಮನ್ನು ಸಮ್ಮೋಹನಕ್ಕೆ ಒಳಪಡಿಸುತ್ತೇನೆ. ಆ ಅನುಭವವನ್ನು ಪಡೆಯಲು ಇಚ್ಛಿಸುವವರು ವೇದಿಕೆ ಮೇಲಕ್ಕೆ ಬನ್ನಿ ಎನ್ನುತ್ತಾನೆ. ಆಸಕ್ತರೂ, ಕುತೂಹಲಿಗಳು ವೇದಿಕೆ ಹತ್ತುತ್ತಾರೆ. ಸೂಚನೆ ಕೊಟ್ಟು ಯಾರು ತನ್ನ ಸೂಚನೆಗಳನ್ನು ಮರುಮಾತಾಡದೇ ಪಾಲಿಸುವ ನಿಶಾನೆ ತೋರಿಸುತ್ತಾರೋ ಅವರನ್ನು ಉಳಿಸಿಕೊಂಡು ಉಳಿದವರನ್ನು ವಾಪಸ್ ಕಳುಹಿಸುತ್ತಾನೆ. ಆಯ್ದ ವ್ಯಕ್ತಿಗಳನ್ನು ಹಿಪ್ನಾಟಿಕ್ ಹಂತಕ್ಕೆ ಒಯ್ದು ಕೆಲವಾರು ಮನರಂಜನಾತ್ಮಕ ಚಟುವಟಿಕೆಗಳನ್ನು ಮಾಡಿಸುತ್ತಾನೆ. ಸೂಜಿಯಿಂದ ಚುಚ್ಚಿದರೂ ವ್ಯಕ್ತಿಗೆ ನೋವಾಗುವುದಿಲ್ಲ. ಗಟ್ಟಿಯಾಗಿ ಚಾಚಿದ ಕೈಯನ್ನು ನಾಲ್ಕಾರು ಜನ ಬಾಗಿಸಲು ಪ್ರಯತ್ನಿಸಿದರೂ ಬಾಗುವುದಿಲ್ಲ. ಪ್ರೌಢರು ಮಕ್ಕಳಂತೆ ಅಂಬೆಗಾಲಿಡುತ್ತಾರೆ. ನರ್ಸರಿ ರೈಮ್ ಹೇಳುತ್ತಾರೆ. ಕಣ್ಣು ಮುಚ್ಚಿಸಿ ಕಾದ ಕಬ್ಬಿಣವನ್ನು ನಿನ್ನ ಕೈಯ ಮೇಲೆ ಇಡುತ್ತೇನೆ ಎಂದು ಹೇಳಿ, ಪೆನ್ಸಿಲ್ ಕಡ್ಡಿಯಿಂದ ಮುಟ್ಟಿದಾಗ ವ್ಯಕ್ತಿ ಬೊಬ್ಬೆ ಹೊಡೆಯುತ್ತಾನೆ. ಈಗ ಏಸಿ ಆನ್ ಆಗಿದೆ. –2 ಡಿಗ್ರಿ ಸೆಲ್ಸಿಯಸ್ ಇದೆ ಎಂದರೆ, ವ್ಯಕ್ತಿಗಳು ಗಡ ಗಡನೆ ನಡುಗುತ್ತಾರೆ!




ಶ್ರೀ ಪಂಚಮುಖಿ ಜ್ಯೋತಿಷ್ಯಂ

INDIA'S MOST POPULAR ASTROLOGER

ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.

ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಬೆಂಗಳೂರು ಮೈಸೂರು 9880444450

